ದಿನಾಂಕಃ **20.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಜಿ.ಎಸ್, ಪಿ ರವರಿಂದಃ

ಮೂಲ ದಾವಾ ಸಂ. **1309/2006** ಪ್ರಕರಣದಲ್ಲಿ ನಾನು ನನ್ನನ್ನು ಪಕ್ಷಗಾರನಾಗಿ ನೇಮಕ ಮಾಡಿಕೊಳ್ಳಬೇಕು ಎಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯು ನ್ಯಾಯಾಲಯದಿಂದ ತಿರಸ್ಕರಗೊಂಡಿರುತ್ತದೆ. ಸದರಿ ಅರ್ಹಜಿಯಲ್ಲಿ ಹೊರ ಬಂದ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಅರ್ಜಿಯಲ್ಲಿ ಹೊರ ಬಂದ ಆದೇಶದ ವಿರುದ್ಧ ನಾನು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ರಿಟ್ ಅರ್ಜಿಯು ಉಚ್ಚ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತದೆ ಎಂದರೆ ಸರಿ.

ನಿಪಿ-**6** ವಿಭಾಗ ಪತ್ರದ ಎ ಶೆಡ್ಯೂಲ್ ಸ್ವತ್ತು ನನ್ನ ತಂದೆಯ ಭಾಗಾಂಶಕ್ಕೆ ಬಂದಿರುತ್ತವೆ. ಕಾನೇಶ್ ಮಾರಿ ಖಾತಾ ನಂ.**166, 167, 168** ಮತ್ತು **169** ಸ್ವತ್ತು ನಿಪಿ-**6** ವಿಭಾಗ ಪತ್ರದ ಎ ಶೆಡ್ಯೂಲ್ ಸ್ವತ್ತಿನ **2** ನೇ ಸ್ವತ್ತಾಗಿರುತ್ತದೆ. **4** ಕಾನೇಶ್ ಮಾರಿ ಸ್ವತ್ತುಗಳು ಒಂದ್ಕೊಂದು ಲಗ್ತಾಗಿ ಒಂದೇ ಚೆಕ್ಕುಬಂದಿಯನ್ನು ಹೊಂದಿರುತ್ತದೆ. ಸದರಿ ಸ್ವತ್ತುಗಳ ಒಟ್ಟು ವಿಸ್ತೀರ್ಣ ಪೂರ್ವ ಪಶ್ಚಿಮ **100** ಅಡಿ ಉತ್ತರ ದಕ್ಷಿಣ **80** ಅಡಿ ಎಂದರೆ ಇರಬಹುದು. ಸದರಿ ಸ್ವತ್ತುಗಳ ಚೆಕ್ಕುಬಂದಿಯು ಪೂರ್ವಕ್ಕೆ ಸರ್ವೆ ನಂ.**47** ಜಮೀನು, ಪಶ್ಚಿಮಕ್ಕೆ ವಜ್ರಪ್ಪ ರವರ ಸ್ವತ್ತು. ವಜ್ರಪ್ಪ

ಎಂದರೆ ಈ ದಾವೆಯ **1** ನೇ ಪ್ರತಿವಾದಿ ನಾಗರತ್ನಮ್ಮ ರವರ ಗಂಡ ಇರುತ್ತಾರೆ. ನಾಗರತ್ನಮ್ಮ ರವರು ಮೂಲ ದಾವೆ ಸಂ.**1309/2006** ರೀತಿಯ ಪ್ರಕರಣವನ್ನು ನ್ಯಾಯಾಲಯದಲ್ಲಿ ದಾಖಲಿಸಿರುತ್ತಾರೆ. ನಿಪಿ-**26** ಬಿ ಖಾತಾ ಎಕ್ಸ್ ಟ್ರಾಕ್ಟ್ ವರಧರಾಜು ರವರ ಹೆಸರಿಗೆ ಇರುತ್ತದೆ. ಸದರಿ ಖಾತೆಯನ್ನು ವರದರಾಜು ರವರ ಹೆಸರೆ ನಮ್ಮ ಒಟ್ಟು ಕುಟುಂಬದ ಪರ ಮಾಡಲಾಗಿರುತ್ತದೆ. ವರದರಾಜು ರವರು ನನ್ನ ಮೃತ ಅಕ್ಕನ ಮಗ. ವರಧರಾಜು ಹೆಸರಿಗೆ ಖಾತೆಯನ್ನು ಮಾಡುವ ಪೂರ್ವದಲ್ಲಿ ಸದರಿ ಸ್ವತ್ತಿನ ಖಾತೆಯು ನನ್ನ ತಂದೆಯ ಹೆಸರಿಗೆ ಮುಂದುವರೆದಿತ್ತು. ನಿಪಿ-**26** ಬಿ ಖಾತಾ ಎಕ್ಸ್ ಟ್ರಾಕ್ಟ್ ಸ್ವತ್ತಿನ ವಿಸ್ತೀರ್ಣ **2600** ಚದುರ ಅಡಿ. ನಿಪಿ-**26** ಬಿ ಖಾತಾ ಎಕ್ಸ್ ಟ್ರಾಕ್ಟ್ ವರಧರಾಜು ಹೆಸರಿಗೆ ಬರುವ ಪೂರ್ವದಲ್ಲಿ ಸದರಿ ಸ್ವತ್ತಿನ ಖಾತೆಯು ಹೇಮಣ್ಣ ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ನೆನಪಿಲ್ಲ. ನಿಪಿ-**26** ಬಿ ಖಾತಾ ಎಕ್ಸ್ ಟ್ರಾಕ್ಟ್ ನ್ನು ವರಧರಾಜು ಹೆಸರಿಗೆ ಸುಮಾರು **8-9** ವರ್ಷದ ಪೂರ್ವದಲ್ಲಿ ಮಾಡಲಾಗಿರುತ್ತದೆ. ನಿಪಿ-**26** ರೀತಿಯ ಖಾತೆಯನ್ನು **2016** ರಲ್ಲಿ ಮಾಡಲಾಗಿರುತ್ತದೆ. ನಿಪಿ-**26** ಖಾತಾ ಎಕ್ಸ್ ಟ್ರಾಕ್ಟ್ ನಲ್ಲಿ ಅಡಕಗೊಂಡಿರುವ ಸ್ವತ್ತು ಖಾಲಿ ನಿವೇಶನ ಇದ್ದು ಅದರಲ್ಲಿ ಒಂದು ಶೆಡ್ ಇರುತ್ತದೆ. ಸದರಿ ಶೆಡ್‌ನ ಒಟ್ಟು ವಿಸ್ತೀರ್ಣ ಸುಮಾರು **1** ರಿಂದ ಒಂದುಕಾಲು ಚದುರ ಅಡಿ ಇರುತ್ತದೆ. ಸದರಿ ಶೆಡನ್ನು ಈ ಪೂರ್ವದ **8-9** ವರ್ಷದಲ್ಲಿ ಕಟ್ಟಿಸಲಾಗಿರುತ್ತದೆ.

ನಿಪಿ-**26** ಬಿ ಖಾತಾ ಎಕ್ಸ ಟ್ರಾಕ್ಟ ನಲ್ಲಿ ಅಡಕಗೊಂಡಿರುವ ಸ್ವತ್ತಿನ ಚೆಕ್ಕುಬಂದಿಯನ್ನು ಹೇಳಲು ಆಗುತ್ತದೆ. ಸಾಕ್ಷಿಯು ಪೂರ್ವಕ್ಕೆ ಸರ್ವೆ ನಂ.**46/1** ಜಮೀನು, ಮೊದಲಿಗೆ ಅಲ್ಲ ಇತ್ತು, ಪಶ್ಚಿಮಕ್ಕೆ ಗಂಗಯ್ಯನ ಜಮೀನು, ಉತ್ತರಕ್ಕೆ ನೀರು ಹರಿಯುವ ಅಲ್ಲ, ದಕ್ಷಿಣಕ್ಕೆ ಕರಗಪ್ಪನ ಮನೆ. ನಿಪಿ-**26** ಖಾತೆಯನ್ನು ವರದರಾಜು ಹೆಸರಿಗೆ ಮಾಡಿಕೊಡುವಂತೆ ನಾನಾಗಲಿ ಅಥವಾ ನನ್ನ ಕುಟುಂಬದವರು ಆಗಲಿ ಯಾವುದೇ ದಾಖಲೆಯನ್ನು ವರದರಾಜು ಹೆಸರಿಗೆ ಬರೆದುಕೊಟ್ಟಿಲ್ಲ ಆದರೆ ಸದರಿ ಖಾತೆಯನ್ನು ವರದರಾಜು ಹೆಸರಿಗೆ ಬರೆದುಕೊಡುವಂತೆ ಪ್ರಾಧಿಕಾರದಲ್ಲಿ ಕೇಳಿಕೊಂಡಿರುತ್ತೇವೆ. ಖಾತೆ ಮಾಡಲು ಪ್ರಾಧಿಕಾರದ ಮುಂದೆ ನಾನು ಮತ್ತು ನನ್ನ ಕುಟುಂಬದ ಎಲ್ಲಾ ಸದಸ್ಯರು ನಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇವೆ. ಸದರಿ ಪ್ರಮಾಣ ಪತ್ರಗಳು ಜೆರಾಕ್ಸ್ ನಕಲು ಮಾತ್ರ ನಮ್ಮ ಬಳಿ ಇರುತ್ತದೆ. ಸದರಿ ಜೆರಾಕ್ಸ ನಕಲನ್ನು ನ್ಯಾಯಾಲಯಕ್ಕೆ ಕೊಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ವರದರಾಜು ಈ ಪ್ರಕರಣಕ್ಕೆ ಪಕ್ಷಗಾರನಾಗಿ ಮಾಡಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.